**ಪಿಡಬ್ಲ್ಯೂ-5**

**ದಿನಾಂಕಃ 29-08-2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಜೆ.ಕೆ.ಕೆ. ವಕೀಲರಿಂದಃ-**

ಈ ದಾವೆಯ ವಾದಿ ನನ್ನ ಅತ್ತೆ. ದಿಃ18-01-2003 ರಿಂದ 28-02-2023 ರವರೆಗೆ ಸೇನೆಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ. ಕರಾರು ಪತ್ರ ಆಗಿದೆ ಎಂದು ನಾನು ಹೇಳಿದ್ದು ಆಗ ನಾನು ರಜೆಯ ಮೇಲೆ ಬಂದಿದ್ದೆ. ದಿಃ15-09-2017 ರಂದು ಎರಡು ಕರಾರು ಪತ್ರ ಆಗಿರುತ್ತದೆ. ಮೊದಲು ಆ ದಿನ ನನ್ನ ಹೆಸರಿಗೆ ಕರಾರುಪತ್ರ ಆಗಿರುತ್ತದೆ. ನಂತರ ಈ ದಾವೆಯ ಹೆಸರಿಗೆ ಇನ್ನೊಂದು ಕರಾರು ಪತ್ರ ಆಗಿರುತ್ತದೆ. ಕರಾರು ಪತ್ರದ ವಿಷಯವನ್ನು ಶೇಖರೇಗೌಡ ಬರೆಯಲು ಹೇಳಿರುತ್ತಾರೆ. ಕರಾರು ಪತ್ರ ಆದ ದಿನ ಶೇಖರೇಗೌಡರಿಗೆ ವಾದಿ ಹಣ ಕೊಟ್ಟಿರುವುದಿಲ್ಲ. ಅದಕ್ಕಿಂತ 3 ತಿಂಗಳ ಹಿಂದೆ ವಾದಿಯ ಮನೆಯಲ್ಲಿ ವಾದಿ ಶೇಖರೇಗೌಡರಿಗೆ ನನ್ನ ಮುಂದೆ ಹಣ ಕೊಟ್ಟಿರುತ್ತಾರೆ. ಆ ದಿನ 7 ಲಕ್ಷ ಕೊಟ್ಟಿದ್ದು ಯಾವುದೇ ದಾಖಲಾತಿ ಮಾಡಿರುವುದಿಲ್ಲ. ಆ ಸಮಯದಲ್ಲಿ ನಾನು, ವಾದಿ, ಶೇಖರೇಗೌಡ, ಆತನ ತಮ್ಮ ವಿಶ್ವನಾಥ ಮತ್ತು ರಂಗಸ್ವಾಮಿ ಇದ್ದೆವು. ಸದರಿ ದಿನದಂದು ಹಣ ಕೊಟ್ಟ ಬಗ್ಗೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಈ ಹಿಂದೆ ಹಣ ಕೊಟ್ಟಿರುತ್ತಾರೆ ಎಂದು ಬರೆಸಲಾಗಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾಖಲೆ ಬರೆಯುವಾಗ ನಾವು ದಾವಾಸ್ತಿಯ ಪಹಣಿ ಪತ್ರಿಕೆಯನ್ನು ಮತ್ತು ಋಣಭಾರ ಪ್ರಮಾಣ ಪತ್ರಿಕೆ, ಮ್ಯುಟೇಶನ್ ಗಳನ್ನು ನೋಡಿರುತ್ತೇವೆ. ಮೂಲತಃ ದಾವಾಸ್ತಿ ಒಟ್ಟು ಕುಟುಂಬದ ಆಸ್ತಿ ಎಂದರೆ ಸಾಕ್ಷಿ ಪಹಣಿಯಲ್ಲಿ ವಿಭಜನೆ ಮೂಲಕ ಶೇಖರೇಗೌಡರಿಗೆ ಬಂದಿರುತ್ತದೆ ಎಂದು ನುಡಿಯುತ್ತಾರೆ. ವಿಭಜನೆ ಆದ ಬಗ್ಗೆ ದಾಖಲೆ ನೋಡಿಲ್ಲ. ರಂಗೇಗೌಡರಿಗೆ ಒಟ್ಟು 4 ಜನ ಮಕ್ಕಳು ಎಂದರೆ ಸಾಕ್ಷಿ ಪ್ರತಿವಾದಿಯರಿಬ್ಬರೇ ಆತನ ಮಕ್ಕಳು ಎಂದು ಗೊತ್ತು. ಕರಾರು ಪತ್ರ ಆಗುವ ಸಮಯದಲ್ಲಿ ವಂಶವೃಕ್ಷವನ್ನು ತಂದಿರುವುದಿಲ್ಲ. ರಾಧಮ್ಮ ಮತ್ತು ವಸಂತಮ್ಮ ಪ್ರತಿವಾದಿಯರ ಸಹೋದರಿಯರು ಎಂದರೆ ಗೊತ್ತಿಲ್ಲ. ನಾನು ಆ ದಿನ ರಜೆ ಮೇಲೆ ಬಂದ ಬಗ್ಗೆ ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ.

ನೊಂದಾಣಾಧಿಕಾರಿಗಳ ಮುಂದೆ ನಗದಾಗಿ ವಾದಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ. ವಾದಿ ಪ್ರತಿವಾದಿ 1 ಲಕ್ಷ ರೂ. ಚೆಕ್ ಮೂಲಕ ಕೊಟ್ಟಿರುತ್ತಾರೆಂದು ಹೇಳಿದ್ದು ಆ ಚೆಕ್ ನಂಬರ್ ಗೊತ್ತಿಲ್ಲ. ಈ ರೀತಿ 1 ಲಕ್ಷ ರೂ.ಗಳ ಚೆಕ್ ಕೊಟ್ಟ ಬಗ್ಗೆ ಕರಾರು ಪತ್ರದಲ್ಲಿ ಷರಾ ಬರೆಸಿರುವುದಿಲ್ಲ. ಈ ರೀತಿ 1 ಲಕ್ಷ ರೂ.ಗಳ ಚೆಕ್ ಬಗ್ಗೆ ವಾದಿ ಹೇಳಿದ್ದು ಆ ರೀತಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಿಃ15-09-2017 ರಂದು ನಾನು ಮತ್ತು ವಾದಿ ಶೇರಿಖಾಗಿ ಮೋಸದಿಂದ ಪ್ರತಿವಾದಿ ಬಳಿಯಿಂದ ಕ್ರಯಪತ್ರ ಬರೆಸಿಕೊಂಡಿರುತ್ತೇವೆಂದರೆ ಸರಿಯಲ್ಲ. ನಾನು ಕೂಡ ನನ್ನ ಹೆಸರಿಗೆ ಕರಾರು ಪತ್ರ ಆಗುವ ಸಮಯದಲ್ಲಿ ಯಾವುದೇ ಹಣ ಕೊಟ್ಟಿರುವುದಿಲ್ಲ ಎಂದರೆ ಸರಿ. ಆ ರೀತಿ ಮೋಸದಿಂದ ಕರಾರು ಪತ್ರ ಆದ ಮೇಲೂ ಕೂಡ ಪ್ರತಿವಾದಿಯರಿಗೆ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ 3 ತಿಂಗಳ ಹಿಂದೆಯೇ ಕೊಟ್ಟಿರುತ್ತೇವೆ. ಈ ರೀತಿ 3 ತಿಂಗಳ ಹಿಂದೆ ಹಣ ಕೊಟ್ಟ ಬಗ್ಗೆ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಈ ರೀತಿ ನಾನಾಗಲೀ, ನನ್ನ ಅತ್ತೆಯಾಗಲೀ ಹಣ ಕೊಟ್ಟಿದ್ದರೆ ಯಾವುದಾದರೂ ದಾಖಲೆ ಬರೆಸಿಕೊಳ್ಳುತ್ತಿದ್ದೆವು ಏಕೆಂದರೆ ಮೋಸ ಮಾಡುವ ಕಾರಣದಿಂದ ಎಂದರೆ ಸರಿಯಲ್ಲ.

ಗಂಡಸಿ ಹೋಬಳಿ, ಗಿರಿ ಸಮುದ್ರದಲ್ಲಿ 1 ಗುಂಟೆಗೆ 70-80 ಸಾವಿರ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿ ತೋಟದ ಜಮೀನು ಎಂದರೆ ಸರಿ. ದಾವಾಸ್ತಿಯನ್ನು ಲಪಟಾಯಿಸಬೇಕೆಂಬ ಉದ್ದೇಶದಿಂದ ನಾನು, ನನ್ನ ಅತ್ತೆ ಬೇರೆ ಬೇರೆ ಕರಾರು ಪತ್ರಗಳನ್ನು ಬರೆಸಿಕೊಂಡಿರುತ್ತೇವೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಭಾಗ ಕೋರಿ ಪ್ರತಿವಾದಿಯರ ಸಹೋದರಿಯರು ಇನ್ನೊಂದು ದಾವೆ ಸಲ್ಲಿಸಿರುತ್ತಾರೆಂದರೆ ಗೊತ್ತಿಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **29-08-2025.**